## High Yielding Varieties of Paddy

*Q.—165. Sri H. PUTTADASA (Sathanur).—

Will the Chief Minister be pleased to state :—

(*a*) the name of high yielding varieties of paddy introduced in the State ;

(*b*) whether the new miracle paddy which is otherwise called "IR-8" has been introduced ;

(*c*) if not, whether they would arrange to get such varieties of seeds ?

*A.*—Sri S. NIJALINGAPPA (Chief Minister).—

(*a*) Taichung-65, Taichung Native-1

(*b*) It is being introduced.

(*c*) Does not arise.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ತಾಯಿಚುಂಗ್ 65 ಮತ್ತು ತಾಯ್ ಚುಂಗ್ ರೇಟಿಪ್ 1ಇವನ್ನು ರಾಜ್ಯದ ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಬೆಳೆ ಮಾಡಿದ್ದಾರೆ, ಅದರ ಉತ್ಪತ್ತಿ ಎಷ್ಟು ಮತ್ತು ಅನೇಕ ಕಡೆ ನಷ್ಟವಾಗಿದೆ, ನಷ್ಟವಾಗಿರುವ ಪ್ರದೇಶಗಳಾವುವು ಮತ್ತು ಅದಕ್ಕೆ ಕಾರಣವೇನು ?

† ಶ್ರೀ ಎಸ್. ನಿಜಲಿಂಗಪ್ಪ.—ನಷ್ಟವೇನೂ ಎಲ್ಲೂ ಆಗಿಲ್ಲ, ರಾಭವಾಗಿದೆ. ನಾವು ನಿರೀಕ್ಷಿಸಿದ್ದುದಕಿಂತ ಜಾಸ್ತಿಯಾಗಿದೆ. ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲ ಪ್ರದೇಶಗಳಲ್ಲೂ ಚೆನ್ನಾಗಿ ಆಗಿದೆ. ಆದರೆ ಈ ಅಂಕಿ ಸಂಖ್ಯೆಗಳನ್ನು ಕೊಡಬಲ್ಲೆ. ಬತ್ತ-ತಾಯ್‌ಚುಂಗ್ 65 ಮುಂಗಾರು ಬೆಳೆ 14 ಸಾವಿರದ ಐನೂರು ಚಿಲ್ಲರೆ ಎಕರೆಯಲ್ಲಿ ಬಿತ್ತರಾಗಿತ್ತು, ಹಿಂಗಾರಿನಲ್ಲಿ 23,453 ಎಕರೆಯಲ್ಲಿ ಬಿತ್ತರಾಗಿತ್ತು. ಇದರಲ್ಲಿ ಬಂದಿರತಕ್ಕುದು 3,64,700 ಕ್ವಿಂಟಾಲ್ ಅಂದರೆ ಒಂದು ಚೀಲ, ಬೀಸಿಗೆ ಬೆಳೆಯಲ್ಲಿ 50,84,000 ಚೀಲ. ಒಟ್ಟು ಒಂದು ಎಕರೆಗೆ ಸರಾಸರಿ 25 ಚೀಲವಾಗಿದೆ. ಆಮೇಲೆ ತಾಯ್‌ಚುಂಗ್ ನೇಟಿವ್ 1,7 ಸಾವಿರ ಎಕರೆ ಮತ್ತು 24 ಸಾವಿರದ ಎಕರೆ ಮತ್ತು ಬಂದಿರುವ ಬೆಳೆ 1,73,000 ಮತ್ತು 3,62,000 ಕ್ವಿಂಟಾಲ್.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಐ. ಆರ್—8 ಬತ್ತವನ್ನು ಪ್ರಯೋಗ ಕ್ಕಾಗಿ ತರಿಸಲಾಗಿದೆ ಎಂದು ಹೇಳಿದ್ದಾರೆ. ಅದನ್ನು ಎಲ್ಲಿಂದ ತರಿಸಿದ್ದಾರೆ, ಎಲ್ಲೆಲ್ಲಿ ಪ್ರಯೋಗ ಮಾಡಿದ್ದಾರೆ, ಅದರಿಂದ ಬಂದಿರುವ ರಿಸರ್ಟ್ ಏನು ?

ಶ್ರೀ ಎಸ್. ನಿಜಲಿಂಗಪ್ಪ.—ತರಿಸಿದ್ದು ಫೆಬ್ರುವರಿ, ಮಾರ್ಚ್ ತಿಂಗಳಿನಲ್ಲಿ. ಒಂದು ಕ್ವಿಂಟಾಲ್ ತರಿಸಿ ಪ್ರಯೋಗ ಮಾಡುತ್ತಿದ್ದೇವೆ. ಆದರ ಪರಿಣಾಮ ಒಳ್ಳೆಯದು ಎಂದು ತಿಳಿದುಕೊಂಡಿದ್ದೇನೆ. ಸಾಕಷ್ಟು ಬೀಜವನ್ನು ಉತ್ಪತ್ತಿ ಮಾಡಿ ಬೇರೆ ಕಡೆಗೆ ಕೊಡಬೇಕು ಎನ್ನುವುದು ಸರ್ಕಾರದ ಉದ್ದೇಶ.

ಶ್ರೀ ಎನ್. ಎ. ಚನ್ನೇಗೌಡ.—ನಮ್ಮ ರಾಜ್ಯದಲ್ಲಿ 45 ರೀಸರ್ಚ್ ಇನ್‌ಸ್ಟಿಟ್ಯೂಷನ್ಸ್ ಇವೆ. ಯಾವುದಾದರೂ ಸ್ಥಳೀಯ ಬತ್ತದ ಬೆಳೆಯನ್ನು ಇವಾಲ್ವ್ ಮಾಡಿ ಸಂಶೋಧನೆ ಮಾಡಿದ್ದಾರೆಯೇ, ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಬೇರೆ ಇನ್ನೊಂದು ಪ್ರಶ್ನೆ ಕೇಳಿದರೆ ಹೇಳುವುದಕ್ಕೆ ಸಾಧ್ಯ.

ಶ್ರೀ ಎನ್. ಚಿಕ್ಕೇಗೌಡ.—ಐ. ಆರ್.—8 ಒಂದು ಕ್ವಿಂಟಾಲ್ ತರಿಸಿದ್ದೇವೆ ಎಂದು ಹೇಳಿದರು. ಬಹಳ ಜನ ರೈತರು 5-6 ಅಥವಾ 8 ಕೊಟ್ಟರೆ ಅದನ್ನು ದ್ವಿಗುಣಗೊಳಿಸುತ್ತೇವೆ ಎಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಂಡಿಲ್ಲವೇ, ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರಯೋಗಕ್ಕೆ ಬಂದಿರುವುದೇ ಮೂರು ನಾಲ್ಕು ತಿಂಗಳ ಕೆಳಗೆ. ಮೈರು ಚೆನ್ನಾಗಿ ಬಂದಿದೆ. ನಾನು ನೋಡಿಕೊಂಡು ಬಂದಿದ್ದೇನೆ. ಅದರಿಂದ ಹೆಚ್ಚು ಅನುಕೂಲ ವಾಗಬಹುದು ಎನ್ನುವ ನಿರೀಕ್ಷೆ ಇದೆ. ಬೀಜಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದಾದ ತಕ್ಷಣ ರೈತರಿಗೆ ಸಹ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ನಂಜಪ್ಪ.—ತಾಯ್‌ಚುಂಗ್ 65 ಮತ್ತು ತಾಯ್‌ಚುಂಗ್ ನೇಟಿವ್ 1 ಈ ಎರಡೂ ಜಾತಿಯ ಬತ್ತಕ್ಕಿಂತಲೂ ನಮ್ಮ ನೇಟಿವ್ ಬತ್ತ ಹೆಚ್ಚು ಗುಣದಿಂದ ಕೂಡಿದ್ದು ಕಡಮೆ ಖರ್ಚಿನಲ್ಲಿ ತೀವ್ರವಾಗಿ ಬೆಳೆ ಬರುತ್ತದೆ ಎನ್ನುವುದು ತಮಗೆ ಗೊತ್ತಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಸರಿಯಲ್ಲ ಎಂದು ಕಾಣುತ್ತದೆ. ರುಚಿಯಲ್ಲ ನಮ್ಮದು ಚೆನ್ನಾಗಿರಬಹುದು. ಆದರೆ ಬೆಳೆ ಹುಲುಸಾಗಿ ಬೆಳೆಯತಕ್ಕದು ತಾಯ್‌ಚುಂಗ್ 65 ಎನ್ನುವುದು.

Dr. R. NAGAN GOUDA.—May I know whether it has come to the notice of the hon'ble Minister for Agriculture and the Chief Minister that the 'Hindu' of two days ago carried a news item coming from Rome and that from a high officer that the Phillipine Islands have discovered a miracle paddy which gives ten times the yield that the present varieties are giving?

Sri S. NIJALINGAPPA.—Of course, that news item has come. I thought that it was only the "IR-8" paddy. If it is different, we will certainly get those paddy seeds and develop them. I am most happy.

ಶ್ರೀ ಜಿ. ರಾಮೇಗೌಡ.—ಮಾನ್ಯ ಮುಖ್ಯ ಮಂತ್ರಿಯವರು ಇತ್ತೀಚೆಗೆ ನಮ್ಮದ್ದಿ ಬತ್ತವೆಂದು ನಾಮಕರಣ ಮಾಡಿದ್ದಾರಲ್ಲ, ಅದಕ್ಕೂ ಐ. ಆರ್.—8ಕ್ಕೂ ಏನಾದರೂ ವ್ಯತ್ಯಾಸವಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಚೆನ್ನಾಗಿದೆ ಎಂದು ನೋಡಿಕೊಂಡು ಆ ರೀತಿಯ ಹೊಸ ಹೆಸರು ಕೊಡಬೇಕೆಂದು ಕೊಟ್ಟಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹೆಬ್ಬಾಳದಲ್ಲಿ ಹಾರ್ವೆಸ್ಟ್ ಪ್ರಯೋಗ ಮಾತಿದ್ದೀರಿ, ಅದು ಎಷ್ಟರವರೆಗೆ ಬಂದಿದೆ?

ಶ್ರೀ ಎಸ್. ನಿಜಲಿಂಗಪ್ಪ.—ಬತ್ತ ಬೆಳೆದು ನಿಂತಿದೆ. ಇನ್ನೂ ಕೊಯ್ಲು ಆಗಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಇದು ಮಲೆನಾಡು ಪ್ರದೇಶದಲ್ಲಿ ಹೇಗೆ ಬೆಳೆಯುತ್ತದೆ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಬಂದುದು ಮೂರು ತಿಂಗಳ ಕೆಳಗೆ. ಪ್ರಯೋಗ ಇಲ್ಲಿ ಮಾಡಿದ್ದೇವೆ. ಎಲ್ಲಿ ಬೆಳೆಯುತ್ತದೆ, ಎಲ್ಲಿ ಬೆಳೆಯುವುವಿಲ್ಲವೆಂಬುದು, ಎರಡು ವರ್ಷ ಬಿಟ್ಟರೆ ನೋಡಲು ಸಾಧ್ಯವಾಗುತ್ತದೆ.

---

## Jakkalamadugu Water Supply Scheme to Chickballapur

*Q.—180. Sri K. M. PUTTASWAMY (Chickballapur).—

Will the Minister for Municipal Administration be pleased to state:—

(*a*) when the estimate for supplying drinking water to Chickballapur from Jakkalamadugu was sanctioned;

(*b*) the stage at which the said work is pending;

(*c*) the reasons for not completing the said work?